ದಕ್ಷಿಣ ಕನ್ನಡ ಜಿಲ್ಲೆಗೆ 1995-96ನೇ ಸಾಲಿಗೆ ಒಟ್ಟು 10,910 ನಿವೇಶನಗಳನ್ನು ಹಾಗೂ ಮಂಗಳೂರು ಪಟ್ಟಣಕ್ಕೆ 750 ನಿವೇಶನಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದೇ ರೀತಿ 2,800 ಮನೆಗಳನ್ನು ಆಶ್ರಯ ಯೋಜನೆಯಡಿ, ಅಂಬೇಡ್ಕರ್ ಯೋಜನೆಯಡಿ 1551 ಹಾಗೂ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ 1330 ಮನೆಗಳನ್ನು ಮಂಗಳೂರು ಜಿಲ್ಲೆಗೆ ನೀಡಲಾಗಿದೆ. ಮಂಗಳೂರು ಪಟ್ಟಣಕ್ಕೆ 705 ಮನೆಗಳ ವಾರ್ಷಿಕ ಗುರಿ ನಿಗದಿಪಡಿಸಲಾಗಿದೆ. ಉಳಿದವರಿಗೆ ಹಂತ ಹಂತವಾಗಿ ಸರ್ಕಾರ 5 ವರ್ಷಗಳಲ್ಲಿ ಜಿಲ್ಲೆಯ ಹಾಗೂ ಮಂಗಳೂರು ಪಟ್ಟಣದ ವಸತಿ : ನಿವೇಶನ ರಹಿತರಿಗೆ ನಿವೇಶನ : ಮನೆ ನೀಡಲಾಗುವುದು.

ಅಧ್ಯಕ್ಷರು : ಉಜಿನೇಶ್ವರ್‌ರವರೆ ತಾವು ಪ್ರಸ್ತಾಪ ಮಾಡಿರುವಂಥ ವಿಚಾರಕ್ಕೆ ಜವಳಿ ಖಾತೆಯ ರಾಜ್ಯ ಸಚಿವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ.

7) ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಗಳಲ್ಲಿ ಕಟ್ಟಲಾಗುವ ಮನೆಗಳನ್ನು ಹಂಚುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) : ಮಾನ್ಯ ಅಧ್ಯಕ್ಷರೆ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಗಳಲ್ಲಿ ಕಟ್ಟಲಾಗುವ ಮನೆಗಳನ್ನು ಹಂಚುವ ವಿಚಾರದಲ್ಲಿ ಗ್ರಾಮಸಭೆಗಳನ್ನು ಕರೆದು ಆ ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸಿ ಮನೆಗಳನ್ನು ಅವರುಗಳಿಗೆ ಹಂಚುವಂತೆ ಪದ್ಧತಿ ಜಾರಿಯಲ್ಲಿ ಇದೆ. ಈ ವಿಚಾರದಲ್ಲಿ ಸರ್ಕಾರದ ಸುತ್ತೋಲೆ ಹಾಗೂ ಆದೇಶಗಳಲ್ಲಿ ಸ್ಪಷ್ಟ ನಿರ್ದೇಶವನ್ನು ನೀಡಲಾಗಿದೆ. ಆದರೆ ಯಾದ್‌ಗಿರಿ ತಾಲ್ಲೂಕಿನ ಪಂಚಾಯಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸರ್ಕಾರದ ಆದೇಶವನ್ನು ಪಾಲನೆ ಮಾಡದೆ ತಮಗೆ ಇಚ್ಛೆ ಬಂದವರಿಗೆ ಮನೆಗಳನ್ನು ಹಂಚಿಕೆ ಮಾಡುತ್ತಿದ್ದು ನಿಜವಾದ ಅರ್ಹ ಫಲಾನುಭವಿಗಳಿಗೆ ಮನೆಗಳು ಸಿಕ್ಕದೆ ಅನ್ಯಾಯವಾಗಿದೆ. ಯಾದ್‌ಗಿರ್ ತಾಲ್ಲೂಕಿನ ಗುರುಮಿಠ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನೇಕ ಗ್ರಾಮಸಭೆಗಳನ್ನು ನಡೆಸಿ ಫಲಾನುಭವಿಗಳನ್ನು ಗುರುತು ಮಾಡಿದ್ದರೂ ಅವರಿಗಾಗಿ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರ ಕೈಗೊಂಡಿರತಕ್ಕ ಕ್ರಮಗಳೇನು? ಆಗಿರುವಂಥ ಅನ್ಯಾಯವನ್ನು ಸರಿಪಡಿಸಲಾಗುವುದೇ ಹೇಗೆ? ಈ ಮೇಲ್ಕಂಡ ವಿಚಾರದಲ್ಲಿ ಮಾನ್ಯ ವಸತಿ ರಾಜ್ಯ ಸಚಿವರು ಹೇಳಿಕೆ ನೀಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಯಾದಗಿರಿ ತಾಲ್ಲೂಕಿನ ಗುರುಮಿಠ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಹಂಚಿಕೆ ಸಂಬಂಧ ಫಲಾನುಭವಿಗಳ ಆಯ್ಕೆಯಲ್ಲಿ ನ್ಯೂನತೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ದಿನಾಂಕ 19-02-96ರರಿದು ಗುಲ್ಬರ್ಗಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾಧಿಕಾರಿ, ಗುಲ್ಬರ್ಗಾ ಜಿಲ್ಲೆ, ಇವರಿಗೆ ನಿಕ್‌ನೆಟ್ ಮೂಲಕ ಶೀಘ್ರ ಆದೇಶ ಕಳುಹಿಸುತ್ತಾ, ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 1 ಹೆಚ್‌ಎಹೆಚ್ 95, ದಿನಾಂಕ 18-8-95ರ ಪ್ರಕಾರ, ಫಲಾನುಭವಿಗಳನ್ನು ಆಶ್ರಯ,ಡಾ॥ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಗುರುತಿಸಬೇಕಾದಾಗ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ ಹಾಗೂ ಮೇಲ್ಕಾಣಿಸಿದ ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿಗಳು ಫಲಾನುಭವಿಗಳ ಗುರಿಯನ್ನು ಆಯಾ ತಾಲ್ಲೂಕು ಪಂಚಾಯಿತಿವಾರು ಗುರಿಯನ್ನು ನಿಗದಿಪಡಿಸತಕ್ಕದ್ದು. ತಾಲ್ಲೂಕು ಪಂಚಾಯಿತಿಯು

ನಿವೇಶನ : ಮನೆಗಳ ಗುರಿಯನ್ನು ಜಿಲ್ಲಾ ಪಂಚಾಯಿತಿಯಿಂದ ಪಡೆದ ಮೇಲೆ ಅದನ್ನು ಗ್ರಾಮ ಪಂಚಾಯಿತಿ ಹಾಗೂ ಗ್ರಾಮವಾರು ಗುರಿಗಳನ್ನು ನಿಗದಿಪಡಿಸತಕ್ಕದ್ದು.

ಗ್ರಾಮ ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಯಿಂದ ವಾರ್ಷಿಕ ಗುರಿಯನ್ನು ಪಡೆದ ಮೇಲೆ ಗ್ರಾಮಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಲ್ಲಿ ಕಾಣಿಸಿದಂತೆ ನಿಯಮಾನುಸಾರ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮ ಸಭೆಯಲ್ಲಿ "ಬಡವರಲ್ಲಿ ಬಡವರು" ತತ್ವದ ಆಧಾರದ ಮೇಲೆ ಗುರಿಗೆ ಸರಿಹೊಂದುವಂತೆ ಫಲಾನುಭವಿಗಳ ಪಟ್ಟಿಯನ್ನು ತಮ್ಮ ಶಿಫಾರಸ್ಸಿನೊಂದಿಗೆ ವಸತಿ : ನಿವೇಶನಗಳನ್ನು ನೀಡಲು ತಾಲ್ಲೂಕು ಪಂಚಾಯಿತಿಗೆ ಬರೆಯತಕ್ಕದ್ದು. ಇದನ್ನು ಆಧರಿಸಿ ತಾಲ್ಲೂಕು ಪಂಚಾಯಿತಿಯು ಗ್ರಾಮ ಪಂಚಾಯಿತಿ ಸಲ್ಲಿಸಿರುವ ಪಟ್ಟಿಯಲ್ಲಿ ಸೂಚಿಸಿರುವ ಫಲಾನುಭವಿಗಳಿಗೆ ಮಾತ್ರ ಮನೆ : ನಿವೇಶನಗಳನ್ನು ಕೊಡತಕ್ಕದ್ದು. ಇದರ ಹೊರತು ಬೇರೆಯವರಿಗೆ ಕೊಡಲು ಸಾಧ್ಯವಿಲ್ಲ. ಇದನ್ನು ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ 19-2-96ರ ನಿಕ್‌ನೆಟ್ ಸಂದೇಶದ ಮೂಲಕ ಸಂಬಂಧಪಟ್ಟ ಯಾದಗಿರಿ ತಾಲ್ಲೂಕು ಪಂಚಾಯಿತಿಗೆ ಕಾನೂನಿನ ಚೌಕಟ್ಟಿನಲ್ಲಿ ಆಯ್ಕೆ ಮಾಡುವಂತೆ ನಿರ್ದೇಶನ ನೀಡಬೇಕೆಂದು ತಿಳಿಸಲಾಯಿತು. ಇದರ ಪ್ರತಿಯನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಕಳುಹಿಸಲು ಸೂಚನೆ ನೀಡಲಾಗಿದೆ. ಹಾಗೂ ಜಿಲ್ಲಾಪರಿಷತ್ ಮುಖ್ಯ ಕಾರ್ಯನಿರ್ವಾಧಿಕಾರಿಗಳು ಯಾದಗಿರಿ ತಾಲ್ಲೂಕಿಗೆ ಭೇಟಿ ನೀಡಿ ಫಲಾನುಭವಿಗಳನ್ನು ನಿಯಮಾವಳಿಗಳಲ್ಲಿ ಇರುವಂತೆ ಗುರ್ತಿಸಲು ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಅದರಂತೆ ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಿಯಮಾವಳಿಗಳಂತೆ ಫಲಾನುಭವಿಗಳಿಗೆ ಆಯ್ಕೆ ಮಾಡಿ ಜಿಲ್ಲಾ ಪಂಚಾಯತ್ ಅನುಮೋದನೆಗಳಿಗೆ ಕಳುಹಿಸಿದ್ದಾರೆ.

8) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ ದರೋಡೆಗಳ ಬಗ್ಗೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅಧ್ಯಕ್ಷರೆ, ಕಳ್ಳತನ ಮತ್ತು ದರೋಡೆಗಳ ಪ್ರಕರಣಗಳು ಹೆಚ್ಚಾಗುತ್ತಿದ್ದು ಇದರಿಂದ ಜನಸಾಮಾನ್ಯರಲ್ಲಿ ಭೀತಿಯ ವಾತಾವರಣ ಉಂಟಾಗಿದೆ. ಹಗಲಿನಲ್ಲಿ ಮನೆಗಳ ಬಾಗಿಲುಗಳನ್ನು ಒಡೆದು ಮನೆಗಳ್ಳತನ ಮಾಡುವುದು ಮತ್ತು ಸರಗಳ್ಳತನ ಮಾಡುವುದು ಹೆಚ್ಚಾಗಿದ್ದು ಸರ್ಕಾರ ಕೂಡಲೇ ಇದರ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ. ಜನರಲ್ಲಿ ಉಂಟಾಗಿರುವ ಭಯದ ವಾತಾವರಣವನ್ನು ದೂರ ಮಾಡಲು ಹೆಚ್ಚಿನ ಪೋಲೀಸ್ ಪಹರೆಯನ್ನು ಮತ್ತು ರಾತ್ರಿಯ ವೇಳೆ ಗಸ್ತು ಹೆಚ್ಚು ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮವನ್ನು ಸದನಕ್ಕೆ ತಿಳಿಸಬೇಕೆಂದು ಮಾನ್ಯ ಗೃಹ ಸಚಿವರನ್ನು ಕೊರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1994ನೇ ಸಾಲಿನಲ್ಲಿ 11,707 ಕಳ್ಳತನದ ಪ್ರಕರಣಗಳು ವರದಿಯಾಗಿದದು, 2441 ಪ್ರಕರಣಗಳು ಪತ್ತೆಯಾಗಿರುತ್ತದೆ. 1995ನೇ ಸಾಲಿನಲ್ಲಿ 11,224ಪ್ರಕರಣಗಳು ವರದಿಯಾಗಿದ್ದು 2728 ಪ್ರಕರಣಗಳು ಪತ್ತೆಯಾಗಿರುತ್ತವೆ. ಈ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಕಳ್ಳತನದ ಪ್ರಕರಣಗಳು 1995ನೇ ಸಾಲಿನಲ್ಲಿ ಇಳಿಮುಖವಾಗಿದ್ದು ಪತ್ತೆಯಾದ ಪ್ರಕರಣಗಳು ಹೆಚ್ಚಿದ್ದು ಗಮನಕ್ಕೆ ಬರುತ್ತದೆ.

ದರೋಡೆ ಮತ್ತು ಡಕಾಯಿತಿ ಪ್ರಕರಣಗಳನ್ನು ಗಮನಿಸಿದರೆ 1994ರಲ್ಲಿ 407 ಪ್ರಕರಣಗಳು ವರದಿಯಾಗಿದ್ದು, 177 ಪ್ರಕರಣಗಳು ಪತ್ತೆಯಾಗಿವೆ. 1995ರಲ್ಲಿ 353 ಪ್ರಕರಣಗಳು ವರದಿಯಾಗಿದ್ದು, 160 ಪ್ರಕರಣಗಳು ಪತ್ತೆಯಾಗಿವೆ. ಈ ಅಂಕಿ